1	2	3	4
4	Kavachoor Village, Boys	84-85	25
5	Doddamane, Boys	88-89	25
	SIRSI TALUK		
1	Sirsi, Boys	77-78	50
2	Dasanakoppa, Boys	83-84	50
3	Banvasi, Boys	83-84	50
	JOIDA TALUK		
1	Joida, Girls	77-78	50
2	Ulavi, Boys	84-85	50
3	Joida, Boys (OBC)	—	50
	YELLAPURA TALUK		
1	Yellapura, Boys	77-78	50
2	Kiravatti, Boys	82-83	50
3	Vajralli, Boys	84-85	25
4	Gullapura, Boys	89-90	25
	HONNAVAR TALUK		
1	Kharwa, Boys	80-81	50
2	Kadatoka, Boys	84-85	25
3	Honnavar, Boys (OBC)	—	30
4	Monky, Boys	89-90	25

ವಿಷಯ :– ಉಚಿತ ಕಾನೂನು ನೆರವು ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 757 (1242)

ಶ್ರೀ ರಾಮಲಿಂಗರೆಡ್ಡಿ (ಜಯನಗರ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಉಚಿತ ಕಾನೂನು ನೆರವು ಪಡೆಯಬೇಕಾದರೆ ಇರಬೇಕಾಗಿರುವ ಅರ್ಹತೆಗಳು ಯಾವುವು ?

ಆ) ಕಳೆದ ಐದು ವರ್ಷಗಳಿಂದ ಎಷ್ಟು ಜನರಿಗೆ ಅದರಲ್ಲೂ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಉಚಿತ ಕಾನೂನು ನೆರವು ಲಭಿಸಿದೆ (ಹೆಸರು ವಿಳಾಸ ಮತ್ತು ವಿಷಯ ಮುಂತಾದ ವಿವರಗಳನ್ನು ನೀಡುವುದು).

ಇ) ಅರ್ಹ ವ್ಯಕ್ತಿಗಳಿಗೆ ಸೂಕ್ತ ರೀತಿಯ ಉಚಿತ ಕಾನೂನು ಲಭಿಸುತ್ತಿಲ್ಲದಿರುವ ಬಗ್ಗೆ ಸರ್ಕಾರದವರಿಗೆ ದೂರುಗಳೇನಾದರೂ ಬಂದಿವೆಯೇ ?

ಈ) ಪ್ರತಿ ವರ್ಷ ಸರ್ಕಾರದವರು ಈ ಉದ್ದೇಶಕ್ಕಾಗಿ ಬಿಡುಗಡೆ ಮಾಡುತ್ತಿರುವ ಹಣವೆಷ್ಟು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

ಅ) ವರ್ಷಕ್ಕೆ 8000–00 ರೂ. ಗಳಿಗಿಂತ ಕಡಿಮೆ ಆದಾಯವಿರುವ ಕುಟುಂಬದ ಸದಸ್ಯರಿಗೆ ಉಚಿತ ಕಾನೂನು ನೆರವು ದೊರೆಯುತ್ತದೆ. ಪರಿಶಿಷ್ಟ ಜನಾಂಗ, ಪರಿಶಿಷ್ಟ ಪಂಗಡ, ಯೋಧರು, ಮಾಜಿ ಯೋಧರು ಮತ್ತು ಕಸ್ಟಡಿಯಲ್ಲಿರುವ ಖೈದಿಗಳಿಗೆ ಈ ಆದಾಯದ ಮಿತಿ ಇಲ್ಲದೆ ಉಚಿತ ಕಾನೂನು ನೆರವು ನೀಡಲಾಗುತ್ತಿದೆ. ಮೋಟಾರು ವಾಹನ ಅಪಘಾತಗಳಲ್ಲಿ ಗಾಯಗೊಂಡವರಿಗೆ ಅಥವಾ ಮೃತ ಪಟ್ಟವರ ವಾರಸುದಾರರಿಗೆ ಯಾವ ಆದಾಯದ ಮಿತಿ ಇಲ್ಲದೆ ಉಚಿತ ಕಾನೂನು ನೆರವು ನೀಡಲಾಗುತ್ತಿದೆ. ಕಾನೂನು ಸಲಹೆಯನ್ನು ಎಲ್ಲ ವರ್ಗದವರಿಗೆ ಉಚಿತವಾಗಿ ನೀಡಲಾಗುತ್ತಿದೆ.

ಆ) ಅನುಬಂಧದಲ್ಲಿ ಉತ್ತರ ನೀಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಹೆಸರು ವಿಳಾಸ ಮತ್ತು ವಿಷಯದ ವಿವರಗಳು ಲಭ್ಯವಿಲ್ಲ. ಅವನ್ನು ರಾಜ್ಯಾದ್ಯಂತ 140 ಸಮಿತಿಗಳಿಂದ ಪಡೆಯಬೇಕಾಗಿರುವುದರಿಂದ ಕಾಲಾವಕಾಶ ಬೇಕಾಗುವುದು.

ಇ) ಇಲ್ಲ.

ಈ) ಈ ಉದ್ದೇಶಕ್ಕಾಗಿ ಸರ್ಕಾರದವರು ಬಿಡುಗಡೆ ಮಾಡಿರುವ ಅನುದಾನ ಈ ಕೆಳಕಂಡಂತೆ ಇದೆ.

1985–86	ರೂ. 20,00,000–00
1986–87	ರೂ. 26,50,000–00
1987–88	ರೂ. 30,50,000–00
1988–89	ರೂ. 28,75,000–00
1989–90	ರೂ. 30,00,000–00

ಅನುಬಂಧ

ಅವಧಿ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಇತರೆ	ಒಟ್ಟು
1986	1398	563	7949	9910
1987	974	268	8721	9963
1988	234	243	4362	4839
1989	511	107	2345	2963
1990	431	63	1952	2426
Total :	3548	1244	25309	30101

ವಿಷಯ :– ನ್ಯಾಯಾಲಯದಲ್ಲಿ ಮುಗ್ಧ ರೈತರುಗಳನ್ನು ಸರ್ಕಾರದ ಜೊತೆಗೆ ಪ್ರತಿವಾದಿಗಳನ್ನಾಗಿ (ಪಾರ್ಟಿ) ಮಾಡಿರುವುದನ್ನು ಕೂಡಲೆ ವಜಾ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 760 (1263)

ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಾಮರಾಜನಗರ ತಾಲ್ಲೂಕು ಪುಟ್ಟನಪುರ ಗ್ರಾಮದಲ್ಲಿ ಸರ್ವೆ ನಂ. 6, 7, 8 ಮತ್ತು 9ರಲ್ಲಿ ಇರುವ ಸರ್ಕಾರಿ ಕಾಲುದಾರಿಯ ಅತಿಕ್ರಮಣದ ಬಗ್ಗೆ ಖಾಸಗಿ ವ್ಯಕ್ತಿಯೊಬ್ಬರು ಸರ್ಕಾರದ ಮೇಲೆ ಚಾಮರಾಜ ನಗರ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವುದು ನಿಜವಲ್ಲವೇ ?

ಆ) ಈ ಮೊಕದ್ದಮೆಯಲ್ಲಿ ಯಾವುದೇ ಸಂಬಂಧ ಇಲ್ಲದ ಮುಗ್ಧ ರೈತರನ್ನು ಸಹ ಪಾರ್ಟಿ (ಪ್ರತಿವಾದಿ) ಗಳನ್ನಾಗಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಸರ್ಕಾರವು ಈ ಮೊಕದ್ದಮೆಯಲ್ಲಿರುವ ಮುಗ್ಧ ರೈತರುಗಳನ್ನು ಪಾರ್ಟಿಯಿಂದ ವಜಾ ಮಾಡಲು ಕ್ರಮ ಕೈಗೊಳ್ಳುವುದೇ ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–

ಅ) ಹೌದು.

ಆ) 3 ರಿಂದ 5 ನೇ ಪ್ರತಿವಾದಿ ರೈತರುಗಳು ಈ ದಾವೆಗೆ ಅವಶ್ಯಕ ಪ್ರತಿವಾದಿಗಳಾಗಿರುತ್ತಾರೆ ಎಂದು ತಿಳಿದು ಬಂದಿದೆ.

ಇ) 3 ರಿಂದ 5 ನೇ ಪ್ರತಿವಾದಿಗಳು ಸರ್ಕಾರಕ್ಕೆ ಸೇರಿದ ನಾಲಾದಲ್ಲಿ ಹಕ್ಕು ಸಾಧಿಸುತ್ತಿರುವುದರಿಂದ ಈ ಪ್ರತಿವಾದಿಗಳನ್ನು ದಾವೆಯಿಂದ ವಜಾಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :– ನಿರುದ್ಯೋಗಿ ಕಾನೂನು ಪದವೀಧರರಿಗೆ ಸ್ಟೈಫಂಡ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 761 (1169)

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ನಿರುದ್ಯೋಗಿ ಕಾನೂನು ಪದವೀಧರರ ಸಂಖ್ಯೆ ಎಷ್ಟು ?

ಆ) ನಿರುದ್ಯೋಗಿ ಕಾನೂನು ಪದವೀಧರರಿಗೆ ನೀಡುತ್ತಿದ್ದ ಸ್ಟೈಫಂಡನ್ನು ನಿಲ್ಲಿಸಿರುವುದರಿಂದ ಅವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಸ್ಟೈಫಂಡನ್ನು ಪುನಃ ನೀಡಲು ಸರ್ಕಾರದವರು ಕ್ರಮ ತೆಗೆದುಕೊಂಡಿರುವರೇ ?

ಈ) ಹಾಗಿದ್ದಲ್ಲಿ ಅದನ್ನು ಎಂದಿನಿಂದ ನೀಡಲಾಗುವುದು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :–